

ಡಾ.ವಿನೋದ ಛೆಬ್ಬಿ

ದಶಕಗಳಿಂದ ಬೇರೂರಿರುವ ದಾಂಪತ್ಯದ ಕೊರತೆಗಳನ್ನು ಇಳಿವಯಸ್ಸಿನಲ್ಲಿ ನೀಗಿಸಿಕೊಳ್ಳಲು ಆದೀತೆ?

# 122: ಇಳಿದಾಂಪತ್ಯದ ಬಯಕೆಗಳು–1

ಯಾವುದೋ ಸಮಾರಂಭಕ್ಕೆಂದು ಹೋಗಿದ್ದೆ. ಅಲ್ಲಿ ವೇದಿಕೆಯನ್ನು ಇನ್ನೊಬ್ಬರೊಡನೆ ಹಂಚಿಕೊಳ್ಳುವ ಪ್ರಸಂಗ ಬಂತು. ಹಾಗೆ ಪರಿಚಯವಾಗಿದ್ದು ಪ್ರೊ. ಧೀರೇಂದ್ರ ಹಾಗೂ ಅವರ ಹೆಂಡತಿ ಧರಿತ್ರಿ (ಊರು, ವ್ಯಕ್ತಿಗಳ ಹೆಸರುಗಳನ್ನು ಬದಲಾಯಿಸಿದ್ದೇನೆ.) ಚಹಾಪಾನದ ಸಮಯದಲ್ಲಿ ಅವರಿಬ್ಬರೂ ನನ್ನನ್ನು ಪ್ರತ್ಯೇಕವಾಗಿ ಸಮೀಪಿಸಿ ಗುಟ್ಟಾಗಿ ಕೇಳಿದರು. "ನೀವು ವಯಸ್ಸಾದ ದಂಪತಿಗಳಿಗೂ ದಾಂಪತ್ಯ ಚಿಕಿತ್ಸೆ ನೀಡುತ್ತೀರಾ?" ನಾನು ಯಾಕಿಲ್ಲ, ವಯಸ್ಸಾದ ದಂಪತಿಗಳೂ ದಂಪತಿಗಳಲ್ಲವೆ ಎಂದಾಗ ತಮ್ಮ ಸಮಸ್ಯೆಯನ್ನು ಹಂಚಿಕೊಂಡರು. ನನ್ನ ಸಲಹಾ ಕೇಂದ್ರ ಬೆಂಗಳೂರಿನ ಮೆಡಿಸೆಕ್ಸ್ ಫೌಂಡೇಶನ್‌ಗೆ ಬರಲು ದಂಪತಿಯನ್ನು ಆಮಂತ್ರಿಸಿದೆ.

ಪ್ರೊ. ಧೀರೇಂದ್ರ ಕಲಕತ್ತೆಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದು ನಿವೃತ್ತಿ ಹೊಂದಿ, ನಂತರ ಬೆಂಗಳೂರಿನಲ್ಲಿ ನೆಲೆಸಿ ಚೂರುಪಾರು ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ವಯಸ್ಸು ಅರವತ್ತರ ಮೇಲಾಗಿದೆ. ಮದುವೆಯಾಗಿ 40 ವರ್ಷವಾಗಿದೆ. ಧರಿತ್ರಿ ಗಂಡನಿಗಿಂತ ಹತ್ತು ವರ್ಷ ಚಿಕ್ಕವರು. ಶುದ್ಧ ಸಂಪ್ರದಾಯಸ್ಥೆ. ಮುಟ್ಟು ನಿಂತು ಸುಮಾರು ವರ್ಷ ಕಳೆದಿದೆ. ದಂಪತಿಗೆ ಬೆಳೆದ ಮಕ್ಕಳಿದ್ದು ಮೊಮ್ಮಕ್ಕಳೂ ಆಗಿದ್ದಾರೆ. ಆದರೂ ಅವರ ನಡುವಿನ ಜಗಳಗಳು ನಿಂತಿಲ್ಲ. ಜಗಳದ ಕಾರಣ? ಗಂಡ ಯಾವಾಗಲೂ ಸುಳ್ಳು ಹೇಳುತ್ತಾರೆಂದು ಹೆಂಡತಿಯ ದೂರು. ಸುಳ್ಳು ಯಾವಾಗಿನಿಂದ ಹೇಳುತ್ತಿದ್ದಾರೆ? ಮದುವೆ ಆದಾಗಿನಿಂದಲೂ. ಯಾವ ಯಾವ ವಿಷಯಗಳ ಬಗೆಗೆ? ಯಾವ ಯಾವ ಎನ್ನುವುದೇನಿಲ್ಲ, ಒಂದೇ ವಿಷಯದ ಬಗೆಗೆ – ಅದು ಧೀರೇಂದ್ರರ ಹಳೆಯ ಸ್ನೇಹಿತೆಯ ಬಗೆಗೆ. ಅಂದರೆ ಧೀರೇಂದ್ರರಿಗೆ ವಿವಾಹಬಾಹಿರ ಸಂಬಂಧವಿದೆಯೆ? ಛೆ, ಹಾಗೇನೂ ಅಲ್ಲ. ಮದುವೆಗೆ ಮುಂಚೆ ಅವರು ಸಹಪಾಠಿ ಹುಡುಗಿಯನ್ನು ಪ್ರೀತಿಸುತ್ತಿದ್ದರಂತೆ. ಆಕೆಯ ಜೊತೆಗೆ ಸ್ವಲ್ಪ ದಿನ ಓಡಾಡಿದ್ದರಂತೆ. ಅದರ ಬಗೆಗೆ ಸುಳ್ಳು ಹೇಳುತ್ತಿದ್ದಾರೆ. ಅಂದರೆ ವಿಷಯವನ್ನು ಮುಚ್ಚಿಡುತ್ತಿದ್ದಾರೆಯೆ? ಹಾಗಲ್ಲ. ಅದನ್ನು ಒಪ್ಪಿಕೊಂಡಿದ್ದಾರೆ. ಪ್ರಶ್ನೆ ಅದಲ್ಲ. ಆ ಹುಡುಗಿಯ ಜೊತೆಗೆ ಏನೇನು ನಡೆಯಿತು ಎನ್ನುವ ವಿವರದ ಬಗೆಗೆ ಪ್ರತಿಸಲ ವಿಚಾರಿಸಿದಾಗಲೂ ಒಂದೊಂದು ವಿಧದ ಉತ್ತರ ಕೊಡುತ್ತಾರೆ. ಒಂದು ಸಂದರ್ಭದ ವಿವರವು ಇನ್ನೊಂದು ಸಂದರ್ಭದ ವಿವರಕ್ಕೆ ತಾಳೆಯಾಗುವುದಿಲ್ಲ. ಅದರಿಂದ ಧರಿತ್ರಿಗೆ ಗೊಂದಲವಾಗಿ ಗಂಡನನ್ನು ನಿಜ ಹೇಳಲೆಂದು ಪೀಡಿಸುತ್ತಾರೆ. ಗಂಡ ಇನ್ನೊಂದಷ್ಟು ವಿವರ ಕೊಟ್ಟು, "ಇದಕ್ಕಿಂತ ಹೆಚ್ಚಿಗೇನೂ ಇಲ್ಲ ಮಹಾರಾಯ್ತಿ. ಇನ್ನೊಂದು ಸಲ ದಯವಿಟ್ಟು ಕೇಳಬೇಡ!" ಎಂದು ಬಾಯಿ ಮುಚ್ಚಿಸುತ್ತಾರೆ. ಗಂಡ ತನ್ನೊಡನೆ ತೆರೆದುಕೊಳ್ಳುತ್ತಿಲ್ಲ, ಮನಸ್ಸು ಬಿಚ್ಚಿ ಮಾತಾಡುತ್ತಿಲ್ಲ, ತನ್ನಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಧರಿತ್ರಿಗೆ ಅನ್ನಿಸುತ್ತದೆ. ಆಗ ಜಗಳ ಶುರು. ಇದೊಂದನ್ನು ಬಿಟ್ಟು ಇಬ್ಬರೂ ಅಚ್ಚುಕಟ್ಟಾಗಿ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಾರೆ.

ಗಂಡನ ವಿವಾಹಪೂರ್ವ ಪ್ರಕರಣ ಧರಿತ್ರಿಗೆ ಗೊತ್ತಾಗಿದ್ದು ಹೇಗೆ?

ಮದುವೆಯಾದ ಹೊಸದರಲ್ಲಿ ಅತ್ತೆಯು ತನ್ನ ಮಗನ ಬಗೆಗೆ ಧರಿತ್ರಿಯ ಮುಂದೆ ಹೇಳಿಕೊಂಡರಂತೆ. ಧೀರ ಮುಂಚೆ ಒಬ್ಬಳು ಕ್ರಿಶ್ಚಿಯನ್ ಹುಡುಗಿಯ ಜೊತೆಗೆ ಓಡಾಡುತ್ತಿದ್ದನಂತೆ. ಅವಳನ್ನು ಮದುವೆಯಾಗಲು ಹೆತ್ತವರಿಗೆ ಕೇಳಿದಾಗ ಅವರು ಒಪ್ಪಲೇ ಇಲ್ಲವಂತೆ. ಹಾಗಾಗಿ ಅದನ್ನು ಕೈಬಿಟ್ಟನಂತೆ. ಅತ್ತೆ ಹೇಳಿದ್ದು ನಿಜವೇ ಎಂದು ಗಂಡನಿಗೆ ಕೇಳಿದಾಗ ಧೀರೇಂದ್ರ ಹೌದೆಂದು ಒಪ್ಪಿಕೊಂಡರೂ ವಿವರ ಕೇಳಿದಾಗ ಅಲಕ್ಷ್ಯ ಮಾಡಿದರಂತೆ. ಧರಿತ್ರಿ ಅಷ್ಟಕ್ಕೇ ನಿಲ್ಲಿಸಿದರೂ ವಿಷಯ ಆಗಾಗ ನೆನಪಿಗೆ ಬರುತ್ತಿತ್ತು: ಅವರಿಬ್ಬರ ನಡುವೆ ಏನೇನು ನಡೆದಿರಬಹುದು? ನಿಜಾಂಶ ತಿಳಿಯಲು ಗಂಡನನ್ನು ಆಗಾಗ ಕೇಳುತ್ತಿದ್ದರು. ಕೇಳಿದಾಗಲೆಲ್ಲ ಗಂಡ ಕೇಳಿದಷ್ಟೇ ಮುಗುಮ್ಮಾಗಿ ಮಾಹಿತಿ ಕೊಟ್ಟು, ಅದರ ಜೊತೆಗೆ, "ಇನ್ನು ನನ್ನ ತಲೆ ತಿನ್ನಬೇಡ" ಎಂದು ಗದರಿಸಿ ಮುಖ ತಿರುಗಿಸುತ್ತಿದ್ದರು. ಇದರಿಂದ ಹೆಂಡತಿಗೆ ಸಮಾಧಾನ ಆಗುತ್ತಿರಲಿಲ್ಲ. ಅಷ್ಟಲ್ಲದೆ, ಯಾವುದೇ ಉಪಪ್ರಶ್ನೆಗಳಿಗೆ ಗಂಡ ಸರಿಯಾಗಿ ಸಮಜಾಯಿಷಿ ಕೊಡುತ್ತಿಲ್ಲ. ಯಾವುದಕ್ಕೂ ಸುಳ್ಳು ಹೇಳದವರು ಇದೊಂದು ಯಾವತ್ತೋ ಮುಗಿದು ಹೋದ ಸಂಗತಿಯ ಬಗೆಗೆ ಏಕೆ ಸುಳ್ಳು ಹೇಳುತ್ತಿದ್ದಾರೆ ಎಂಬುದೇ ಹೆಂಡತಿಗೆ ಪ್ರಶ್ನೆಯಾಗಿದೆ. ತನ್ನಿಂದ ಏನನ್ನು ಮುಚ್ಚಿಡುತ್ತಿದ್ದಾರೆ ಎಂಬುದೇ ಪ್ರಶ್ನೆಯಾಗಿ ಗಂಡನ ಮೇಲೆ ಅಪನಂಬಿಕೆ ಬೆಳೆಯುತ್ತಿದೆ. ಅಪನಂಬಿಕೆ ಬೆಳೆದಷ್ಟೂ ಮುಂದಿನ ಸಲದ ಪ್ರಶ್ನೆ ಇನ್ನೂ ಗಡಚಾಗುತ್ತ ಅದನ್ನು ಉತ್ತರಿಸಲು ಹೋಗಿ ಗಂಡನಿಗೆ ಇನ್ನೂ ಹಿಂಸೆಯಾಗುತ್ತಿದೆ. ಇದೇ ಭೂತಾಕಾರವಾಗಿ ದಂಪತಿಯ ನೆಮ್ಮದಿಯನ್ನು ಕೊಲ್ಲುತ್ತಿದೆ.

ಅದು ಸರಿ, ಮದುವೆಯಾದ ನಲವತ್ತು ವರ್ಷಗಳ ನಂತರ, ಈ ಇಳಿವಯಸ್ಸಿನಲ್ಲಿ ಪರಿಹಾರ ಹುಡುಕಿಕೊಳ್ಳುವ ವಿಚಾರ ಹೇಗೆ ಬಂತು? ಅದಕ್ಕೂ ಕಾರಣವಿದೆ. ಇವರ ಮಕ್ಕಳು ಮದುವೆಯಾಗಿ ವಿದೇಶಗಳಲ್ಲಿ ನೆಲೆಸಿದ್ದಾರೆ. ಇಬ್ಬರೂ ಆಗಾಗ ಅವರಲ್ಲಿದ್ದು ಕೌಟುಂಬಿಕ ಸೌಹಾರ್ದತೆಯನ್ನು ಸವಿದು ಮರಳುತ್ತಾರೆ. ಮರಳಿ ಬಂದಾಗಲೆಲ್ಲ ಮನೆ ಖಾಲಿ ಗೂಡಾಗಿ ಕಾಡುತ್ತದೆ. ಸಾಕಾಗದ್ದಕ್ಕೆ ಪತಿಯ ನಿವೃತ್ತಿಯ ನಂತರ ಇಬ್ಬರಿಗೂ ಸಾಕಷ್ಟು ಸಮಯವಿದೆ. ಸಮಯ ಸಿಕ್ಕಾಗಲೆಲ್ಲ ಧರಿತ್ರಿಗೆ ಇಬ್ಬರ ನಡುವಿನ ಏಕೈಕ ಕೊರತೆ ಎದ್ದುಕಾಡುತ್ತ ಪರಿಹಾರ ಹುಡುಕಲು ಹೊರಡುತ್ತಾರೆ. ಆದರೆ ಒಂದೇ ಪ್ರಶ್ನೆಗೆ ಎಷ್ಟೆಂದು ಉತ್ತರಿಸುವುದು? ಧೀರೇಂದ್ರರಿಗೆ ರೋಸಿಹೋಗಿ ನನ್ನ ಸಲಹೆ ಪಡೆಯುವ ನಿರ್ಧಾರ ಮಾಡಿದ್ದಾರೆ.

ಧೀರೇಂದ್ರ–ಧರಿತ್ರಿಯ ಮದುವೆಯ ವಿವರ ಕಲೆಹಾಕಿದೆ. ಇವರದು ಹಿರಿಯರು ವ್ಯವಸ್ಥೆಗೊಳಿಸಿದ ವಿವಾಹ. ಹುಡುಗಿ ಬೆಂಗಳೂರಿನವಳು. ಹುಡುಗನ ಕಡೆಯವರು ಕಲಕತ್ತೆಯಿಂದ ಬಂದು ನೋಡಿ ಒಪ್ಪಿದರಂತೆ. ಮದುವೆ ನಡೆಯಲು ಒಂದು ವರ್ಷ ಸಮಯವಿತ್ತು. ಆ ಅವಧಿಯಲ್ಲಿ (ಆಗ ದೂರವಾಣಿಯ ಸೌಕರ್ಯ ಇರಲಿಲ್ಲ) ಯುವಕ ಧೀರೇಂದ್ರ ಧರಿತ್ರಿಗೆ ಪ್ರೇಮಪತ್ರಗಳನ್ನು ಬರೆದದ್ದೇ ಬರೆದಿದ್ದು. ಅವನಿಗೆ ಹಿಂದೀ ಚಲಚ್ಚಿತ್ರಗಳ ಹುಚ್ಚು ಬೇರೆ. ಅವುಗಳ ಪ್ರಣಯ ಗೀತೆಗಳನ್ನು ಹದಿನೇಳರ ಕನಸಿನ ಹುಡುಗಿಗೆ ಅನ್ವಯವಾಗುವಂತೆ ಬದಲಿಸಿ ಪ್ರೇಮನಿವೇದನೆ ಮಾಡಿಕೊಂಡಿದ್ದು ಪುಟಗಟ್ಟಲೆ ಇದೆ. ಧರಿತ್ರಿಗೂ ತನ್ನನ್ನು ಆರಾಧಿಸುವ ಹುಡುಗನೊಬ್ಬನಿದ್ದಾನೆ ಎನ್ನುವುದೇ ಮೈ ಪುಳಕಗೊಳ್ಳುವ ಸಂಗತಿ. ಹಾಗಾಗಿ ಮದುವೆಯ ಹೊತ್ತಿಗೆ ಇಬ್ಬರೂ ಅದ್ಭುತ ಪ್ರಣಯಿಗಳಾಗಿ ಬದಲಾವಣೆ ಹೊಂದಿದ್ದರು. ಅವರ ವೈವಾಹಿಕ ಬದುಕು ಶುರುವಾಗಿದ್ದು ಕಲಕತ್ತೆಯಲ್ಲಿ. ಪ್ರತಿರಾತ್ರಿಯೂ ರೋಚಕವಾಗಿತ್ತು ಎಂದು ಅವುಗಳನ್ನು ಈಗಲೂ ಮೆಲುಕುಹಾಕುತ್ತಾರೆ. ವಯಸ್ಸು ಇಳಿಮುಖವಾದರೂ ಸಮಾಗಮ ಕಳೆ ಕಳೆದುಕೊಂಡಿಲ್ಲ ಎಂದು ಇಬ್ಬರೂ ಒಪ್ಪಿಕೊಳ್ಳುತ್ತಾರೆ.

ಒಬ್ಬರನ್ನೊಬ್ಬರು ಇಷ್ಟೊಂದು ಪ್ರೀತಿಸುವ, ಇಷ್ಟೊಂದು ಸುಖಪಟ್ಟಿರುವ, ಪರಸ್ಪರ ಬದ್ಧರಾಗಿರುವ ದಂಪತಿಗೆ ವಿವಾಹಪೂರ್ವ ಪ್ರೇಮ ಪ್ರಕರಣವೊಂದು ನಲವತ್ತು ವರ್ಷಗಳ ನಂತರವೂ ಕಾಡುತ್ತಿರುವುದರ ಹಿಂದಿನ ಕಾರಣ ಏನಿರಬಹುದು?

ಇದನ್ನು ಮುಂದಿನ ಸಂಚಿಕೆಯಲ್ಲಿ ವಿವರಿಸುತ್ತೇನೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.